ನನ್ನ ಸಹಮತವೂ ಇದೆ. ಅನೇಕ ಬಾರಿ ಬಾಲ ಹಸುಳೆಗಳನ್ನು ನಾವು ರಿಮ್ಯಾಂಡ್ ಹೋಮಿನಲ್ಲಿ ಹಾಕುವುದರಿಂದ ಅವರ ಮನಸ್ಸು ಬಹಳ ಕಠಿಣವಾಗುತ್ತದೆ. They can become hardcore criminals. I do understand, I am thinking of preparing a scheme by which we can think how best we can resolve this. ಈ ಸೆಂಟರ್‌ಗಳ ಬಗ್ಗೆ ಪ್ರತ್ಯೇಕವಾಗಿ ಕಾರ್ಯಕ್ರಮ ತೆಗೆದುಕೊಳ್ಳುವ ಉದ್ದೇಶ ಇದೆ. ನಾನು ಆದಷ್ಟು ಜಾಗ್ರತೆ ಈ ಬಗ್ಗೆ ಒಂದು ಪರಿಹಾರದ ಸೂತ್ರವನ್ನು ಕಂಡುಕೊಂಡು ಮುಖ್ಯವಾಗಿ 14 ವರ್ಷಗಳ ಕೆಳಗಿನವರು ಅವರ ಮೃದು ಮನಸ್ಸಿಗೆ ಆಘಾತ ಆಗದೆ ಇರುವ ರೀತಿಯಲ್ಲಿ ಅವರನ್ನು ಸರಿಯಾದ ದಾರಿಗೆ ತಂದು ಉತ್ತಮ ನಾಗರೀಕರಾಗಿ ಬೆಳೆಸಲಿಕ್ಕೆ ಯಾವ ರೀತಿಯಲ್ಲಿ ಸಾಧ್ಯ ಇದೆ. ಇದರ ಬಗ್ಗೆ ನಾನು ಸೆಪರೇಟ್ ಆಗಿ ಒಂದು ಯೋಜನೆಯನ್ನು ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಕಡೆ ತಾವು ಭರವಸೆ ಕೊಟ್ಟಿದ್ದೀರಿ, ಯಾರಿಗೆ ಒಳ್ಳೆಯ ನಡತೆ ಇದೆ ಅಂಥವರಿಗೆ ಆ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಲಿಕ್ಕೆ ಏನಾದರೂ ಅನುಕೂಲ ಮಾಡಿ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಜೀವಾವಧಿ ಶಿಕ್ಷೆಯನ್ನು ಕಡಿಮೆ ಮಾಡುವ ವಿಚಾರದಲ್ಲಿ ನಾವು ಈಗಾಗಲೇ ಒಂದು ಮಸೂದೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಬಹುಶಃ ಅದು ಕೇಂದ್ರದವರು ಒಪ್ಪದೆ ಹಾಗೆ ಬಂದಿದೆ. ನಾವು ಪ್ರಯತ್ನಗಳನ್ನು ನಡೆಸಿದರೂ ಅದು ಹಿಂದೆ ಬಂದಿದೆ. ಇದು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರ. ಆದುದರಿಂದ ನಾವೇ ಅದನ್ನು ಸ್ವಂತವಾಗಿ ಕಾನೂನು ಮಾಡುವುದಕ್ಕೆ ಆಗುವುದಿಲ್ಲ. ನಾವು ಶಿಫಾರಸ್ಸು ಮಾಡಬಹುದು ಅಷ್ಟೆ.

ಕೊಳಚೆ ನಿವಾಸಿಗಳಿಗೆ ನಿವೇಶನಗಳ ಹಂಚಿಕೆ ಕುರಿತು.

360-ಶ್ರೀ ಮನೋಹರ್, ಹ. ತಹಶೀಲ್ದಾರ್. ಡಾ: ಬಿ.ಡಿ. ಗಂಗಪ್ಪ (ಹೊನ್ನಾಳಿ) ನಾರಾಯಣರಾವ್ ಮನಹಳ್ಳಿ (ಬಿದರ್), ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು), ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ), ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಸುಮಾರು ವರ್ಷಗಳ ಹಿಂದೆಯೇ ಮನೆಗಳನ್ನು ಕಳೆದುಕೊಂಡು ಬೀದಿಪಾಲಾದ ಸುಮಾರು 10058 ಬಡ ಕೊಳಚೆ ನಿವಾಸಿಗಳಿಗೆ 20 x 30 ಅಳತೆಯ ನಿವೇಶನಗಳನ್ನು ವಿತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಏನು ಕ್ರಮ ಕೈಗೊಂಡಿದೆ;

ಆ) ನಿರ್ವಸಿತ ಕೊಳಚೆ ನಿವಾಸಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳು ಈಗಾಗಲೇ 8 ಆದೇಶಗಳನ್ನು ಹೊರಡಿಸಿರುವುದು ನಿಜವಲ್ಲವೆ, ವಿವರಗಳನ್ನು ಆವರಣದಲ್ಲಿ ಒದಗಿಸಲಾಗಿದೆ.

1) ಸಿಎಂ. 141 ಎಂಐಎನ್ (2) ಸಿಎಂ 2139 ಎಂಐಎನ್ 93 (3) ಸಿಎಂ 2239 ಎಂಐಎನ್ 93 (4) ಸಿಎಂ 2453 ಎಂಐಎನ್ 93 (5) ಸಿಎಂ 2512 ಎಂಐಎನ್ (6) ಸಿಎಂ. ೨೫೫೩೪ ಎಐಎನ್ 93 (7) ಸಿಎಂ 2874 ಎಂಐಎನ್ 93 (8) ಸಿಎಂ 2916 ಎಂಐಎನ್ 93.

ಇ) ಈ ಕಡು ಬಡವರಿಗೆ ಪುನರ್ವಸತಿಯನ್ನು ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಯವರು ಅನೇಕ ಬಾರಿ ಅರೆ ಸರ್ಕಾರಿ ಪತ್ರಗಳನ್ನು

ಈ) ಬಿಡಿಎ ಯ ಉನ್ನತ ಅಧಿಕಾರಿಗಳವರ ಸಭೆಯಲ್ಲಿ ದಿನಾಂಕ 29.9.1993 ರಂದು ಈ ಬಡವರಿಗೆ ನಿವೇಶನಗಳನ್ನು ಹಂಚಲು ಸೂಕ್ತ ನಿರ್ಣಯಗಳನ್ನು ಅನುಕಂಪದಿಂದ ಅಂಗೀಕರಿಸಿರುವುದು ನಿಜವಲ್ಲವೇ?

ಉ) ನಿರ್ವಸಿತ ಅರ್ಹರ ಪಟ್ಟಿಯು ಬಿಡಿಎ ಗೆ ತಲುಪಿದೆಯೇ; ಬಾಕಿ ಇದ್ದಲ್ಲಿ ಉಳಿದ ಪಟ್ಟಿಯನ್ನು ಎಂದು ಪಡೆಯಲಾಗುವುದು;

ಊ) ಸಮಿತಿಯನ್ನು ಸಲ್ಲಿಸಿರುವ ಅನೇಕ ದಾಖಲಾತಿಗಳನ್ನು ತಾರೀಖು 26.10.93ರಂದೇ ಬಿಡಿಎ ಆಯುಕ್ತರಿಗೆ ಇವು ನೇರವಾಗಿ ಸೇರಿವೆಯೇ;

ಋ) ಈ ನಿರ್ವಸಿತರ ಪರವಾಗಿ ಕರ್ನಾಟಕ ದಲಿತ ಕ್ರಿಯಾ ಸಮಿತಿಯ ಕೇಂದ್ರ ಕಛೇರಿಯು ಸಂಚಾಲಕರು ಸಲ್ಲಿಸಿರುವ 10 ಬೇಡಿಕೆಗಳ ಅನೇಕ ಮನವಿಗಳು ಮತ್ತು ಮೇಲ್ಮನವಿಗಳು ಸಹ ಬಿ.ಡಿ.ಎ. ಗೆ ಬಂದಿವೆಯೇ?

ಋ) ಈ ನಿರ್ವಸಿತರಾದ ಪರಿಶಿಷ್ಟ ಜಾತಿ, ವರ್ಗ ಹಾಗೂ ಅಲ್ಪ ಸಂಖ್ಯಾತರು ಮತ್ತು ಕಡುಬಡವರಾದ ಇವರುಗಳಿಗೆ 20 x 30 ಅಳತೆಗಳ ನಿವೇಶನಗಳನ್ನು ಮಾನವೀಯ ದೃಷ್ಟಿಯಿಂದ ವಿತರಿಸಲು ಇನ್ನು ಎಷ್ಟು ಕಾಲಾವಧಿ ಬೇಕು;

ಎ) ಎಂದು ಪುನರ್ವಸತಿಯನ್ನು ಕಲ್ಪಿಸಲಾಗುವುದು.

ಏ) ಮುಖ್ಯಮಂತ್ರಿಗಳು ಈ ಬಗ್ಗೆ ಪುನಃ ಸ್ಪಷ್ಟವಾದ ಆದೇಶ ಹೊರಡಿಸಿ ಖಚಿತ ದಿನಾಂಕವನ್ನು ಕೊಡುವುದೇ;

ಐ) ಪುನರ್ವಸತಿ ಕಲ್ಪಿಸುವ ಬಗ್ಗೆ ದಿನಾಂಕ: 31.1.1994 ರಲ್ಲಿ ಬಿ.ಡಿ.ಎ. ಅಧಿಕಾರಿಗಳು ಮರು ಸಭೆ ಸೇರಿ ಸೂಕ್ತ ನಿರ್ಣಯಗಳನ್ನು ಕೈಗೊಂಡಿದ್ದಾರೆಯೇ;

ಹಾಗಿಲ್ಲದಿದ್ದಲ್ಲಿ ನಿರ್ಣಯಗಳನ್ನು ಈ ಕುರಿತು ಎಂದು ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒದಗಿಸಿರುವ ಮಾಹಿತಿಯ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಿನಲ್ಲಿ ನಿರ್ಮಿಸಲ್ಪಟ್ಟ ಗುಡಿಸಲುಗಳನ್ನು ನೆಲಸಮ ಮಾಡಿದ್ದರಿಂದ ನಿರ್ವಸತಿದಾರರಾದ 5076 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಈವರೆಗೆ ಬಿ.ಡಿ.ಎ. ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಿಕೊಂಡಿರುವ 15,017 ಕುಟುಂಬಗಳಿಗೆ ಮನೆ ಗುಡಿಸಲುಗಳನ್ನು ಸಕ್ರಮಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೈಗೊಂಡಿದೆ, ಹಾಗೂ ಫಲಾನುಭವಿಗಳಿಗೆ ನಿವೇಶನಗಳನ್ನು ಸ್ಥಿರೀಕರಿಸಿದೆ, ಈ ಪ್ರಕರಣದಲ್ಲಿ ವಿವಿಧ ಬಡಾವಣೆಗಳಲ್ಲಿ ಆಕ್ರಮವಾಗಿ ಮಾಡಿದ್ದರಿಂದ ನಿರ್ವಸತಿದಾರರ ಪೂರ್ಣ ಮಾಹಿತಿಯು ಪ್ರಶ್ನೆಯಲ್ಲಿ ತಿಳಿಸಿರುವಂತೆ ಕಂಡುಬರುವುದಿಲ್ಲ. ಆದ್ದರಿಂದ ಅರ್ಜಿದಾರರು ಕಂಡುಬರುವುದಿಲ್ಲ, ಆದ್ದರಿಂದ ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿಲ್ಲವಾದ್ದರಿಂದ ಸ್ಪಷ್ಟ ಉತ್ತರವನ್ನು ಒದಗಿಸಲಾಗುತ್ತಿಲ್ಲ.

ಆ) ನಿಯಮನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುವ ಆ ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಇ) ಹೌದು, ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳುವಳಿಕೆಯುಳ್ಳ ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಈ) ದಿನಾಂಕ: 29.9.1993ರ ಅಧಿಕಾರಿಗಳ ಸಬೆಯಲ್ಲಿ ನೆಲಸಮ ಮಾಡಿದ ಬಗ್ಗೆ ಪೂರ್ಣ ದಾಖಲೆಗಳು ಹಾಗೂ ಸಾಕ್ಷಾಧಾರಗಳನ್ನು ಒದಗಿಸುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ.

ಉ) ಈ ಬಗ್ಗೆ ನಿರ್ವಸಿತರ ಪಟ್ಟಿಯನ್ನು ಸಲ್ಲಿಸಿದ್ದರೂ ಗುಡಿಸಲು ನೆಲಸಮ ಮಾಡಿದ್ದರಿಂದ ನಿರ್ವಸಿತರಾದರೆಂದು ಹೇಳಲು ಪುರಾವೆ ದಾಖಲೆ ಹಾಗೂ

ಸಾಕ್ಷಾಧಾರಗಳನ್ನು ಹೊಂದಿರುವ ಅರ್ಹತಾ ಪಟ್ಟಿಯನ್ನು ಪ್ರಾಧಿಕಾರಕ್ಕೆ ಒದಗಿಸಿರುವುದಿಲ್ಲ. ಅದನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಊ) - ಹೌದು -

ಋ) - ಹೌದು -

ೠ) ಅನಧಿಕೃತವಾಗಿ ನೆಲೆಸಿದ್ದರೆನ್ನಲಾದ ಗುಡಿಸಲುಗಳನ್ನು ನೆಲಸಮ ಮಾಡಿದ್ದರ ಬಗ್ಗೆ ಪೂರ್ಣವಾದ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲದಿರುವುದರಿಂದ ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂತಿಷ್ಟೇ ಕಾಲಾವಧಿಯಲ್ಲಿ ವಿತರಿಸಲಾಗುವುದೆಂದು ಹೇಳಲು ಸಾಧ್ಯವಾಗುತ್ತಿಲ್ಲ.

ಎ) ಮತ್ತು ಏ) ಸಂಬಂಧಪಟ್ಟವರು, ಗುಡಿಸಲುಗಳನ್ನು ನೆಲಸಮ ಮಾಡಿರುವ ಬಗ್ಗೆ ಪುರಾವೆ, ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿದ ನಂತರ ಈ ಬಗ್ಗೆ ಜರೂರು ಕ್ರಮ ಕೈಗೊಳ್ಳಲಾಗುವುದು. ಆದರೆ ಇಂತಿಷ್ಟೇ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಐ) ಹೌದು, ಬಿ.ಡಿ.ಎ. ಅಧಿಕಾರಿಗಳು ದಿನಾಂಕ 31.1.94 ರಂದು ಮರುಸಭೆ ಸೇರಿ ದಿನಾಂಕ 29.9.93ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿದ್ದಾರೆ. ಮೇಲೆ ಹೇಳಿದ ವಿವರಗಳನ್ನು ಒದಗಿಸಿದ್ದಲ್ಲಿ ಈ ಬಗ್ಗೆ ಆದಷ್ಟು ಜಾಗ್ರತೆ ನಿರ್ಧಾರ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಅಧ್ಯಕ್ಷರೇ ಬಿ.ಡಿ.ಎ. ಸುಮಾರು 10 ಸಾವಿರ ಮನೆಗಳು ಕೊಳಚೆ ಪ್ರದೇಶದಲ್ಲಿ ಬೀದಿ ಪಾಲಾಗಿವೆ. ಅನಂತರ ಮುಖ್ಯಮಂತ್ರಿಗಳು ಹಲವಾರು ಸಾರಿ ಬಿ.ಡಿ.ಎ. ನವರಿಗೆ ಆದೇಶ ಕೊಟ್ಟಿದ್ದಾರೆ. ಸ್ಪಷ್ಟ ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೆ ಬಿ.ಡಿ.ಎ. ನವರು ತಮ್ಮ ಕಾರ್ಯವನ್ನು ಸಂಪೂರ್ಣವಾಗಿ ಮಾಡಿಲ್ಲ ಎಂದು ಉತ್ತರದಿಂದ ತಿಳಿದು ಬಂದಿದೆ. ಯಾವಾಗ ಈ ಕೆಲಸ ಮಾಡುತ್ತೀರಿ ಎಷ್ಟು ಬೇಗ ಬಡಜನತೆಗೆ ಮನೆ ಸಿಗುತ್ತವೆ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಧ್ಯಕ್ಷರೆ, ಅನೇಕ ಸಾರಿ ಇದರ ಬಗ್ಗೆ ದೂರುಗಳನ್ನು ಸಂಬಂಧಪಟ್ಟವರು ಕೊಟ್ಟಿದ್ದಾರೆ. ನಮಗಿರತಕ್ಕ ಕಷ್ಟ ಎಂದರೆ, ಇದರಲ್ಲಿ ಯಾರ್ಯಾರು ನಿರ್ವಸಿತರಾಗಿದ್ದಾರೆ ಎಂಬ ಬಗ್ಗೆ ನಮ್ಮಲ್ಲಿ ಲೆಕ್ಕ ಇದೆ. ಎಲ್ಲೆಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಜನ ಎಂಬ ಅಂಕಿಅಂಶ ಇದೆ. ಸುಮಾರು 21 ಸ್ಥಳಗಳಲ್ಲಿ ಪುನರ್ ವಸತಿಗಾಗಿ ಗುರ್ತಿಸಿರುವವರ ಸಂಖ್ಯೆ 5076. ಆದರೆ ಬಿ.ಡಿ.ಎ. ವತಿಯಿಂದ ಪುನರ್ ವಸತಿ ಕಲ್ಪಿಸಿರುವ ಕುಟುಂಬಗಳ ಸಂಖ್ಯೆ 5076. ಈ ನಮ್ಮ ಲೆಕ್ಕಾಚಾರ ಸರಿ. ಆದರೆ ಇನ್ನೂ ಅನೇಕ ಕುಟುಂಬಗಳಿಗೆ ಪುನರ್ವಸತಿ ಆಗಬೇಕೆಂದು ಬೇಡಿಕೆಗಳು ಬರುತ್ತಲೇ ಇವೆ. ಅನೇಕ ಸಂದರ್ಭಗಳಲ್ಲಿ ನನಗೆ ದೂರುಗಳನ್ನೂ ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ದಲಿತ ಕ್ರಿಯಾ ಸಮಿತಿಯವರು ದೂರು ಕೊಟ್ಟಿದ್ದಾರೆ. ನಾನು ಅವರಿಂದ ವಿವರಗಳನ್ನು ಕೇಳಿದ್ದೇನೆ. ಏಕೆಂದರೆ ನಾವು ಗುರ್ತಿಸಿದ್ದು ಇಷ್ಟು; ಕೊಟ್ಟಿರತಕ್ಕದ್ದು ಇಷ್ಟು. ಆದರೆ ಇನ್ನುಳಿದ ಜನರು ಯಾರು? ಅವರು ಎಲ್ಲಿದ್ದಾರೆ? ಅವರ ಹೆಸರು, ಆಯಾಯ ಪ್ರದೇಶದ ಹೆಸರುಗಳನ್ನು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನಾನು ಎಷ್ಟು ಸಾರಿ ಕೇಳಿದರೂ ಅವರು ನನಗೆ ಈ ಮಾಹಿತಿಯನ್ನು ಕೊಡುತ್ತಲೇ ಇಲ್ಲ. ಮಾಹಿತಿ ಕೊಟ್ಟರೆ ಅವರನ್ನು ಗುರ್ತಿಸಿ ಪುನರ್ವಸತಿ ಕಲ್ಪಿಸಲು ಸಾಧ್ಯವಾಗುತ್ತದೆ.